ಕರ್ನಾಟಕ ವಿಧಾನ ಸಭೆ

ಶುಕ್ರವಾರ 27 ನೇ ಆಗಸ್ಟ್ 1993

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯.೫೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್.ಕೌಜಲಗಿ)
ಪೀಠವನ್ನು ಅಲಂಕರಿಸಿದ್ದರು.

-: 0 :-

ವಿಷಯ :- ಮುಖ್ಯಮಂತ್ರಿಗಳವರ ಮೇಲೆ ಹಲ್ಲೆ ನಡೆದಿರುವ ಬಗ್ಗೆ :-

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :- ಮಾನ್ಯ ಅಧ್ಯಕ್ಷರೇ, ಇವತ್ತು ರಾಜ್ಯದಲ್ಲಿ ನಡೆದಿರುವಂತಹ ವಿದ್ಯಾಮಾನಗಳ ಬಗ್ಗೆ ಬಹಳ ಗಂಭೀರವಾದಂತಹ ವಾತಾವರಣ ನಿರ್ಮಾಣವಾಗಿದೆ. ರಾಜ್ಯದ ಮುಖ್ಯಮಂತ್ರಿಗಳ ಮೇಲೆಯೇ ದೊಡ್ಡ ಹಲ್ಲೆಯ ಪ್ರಯತ್ನ ನಡೆದಿದೆ, ಕೈ ಕೈ ಮಿಲಾಯಿಸುವಂತಹ ಪರಿಸ್ಥಿತಿ ಬಂದಿದೆ; ಈ ಬಗ್ಗೆ ಎಲ್ಲಾ ಪತ್ರಿಕೆಗಳ ಮುಖಪುಟಗಳಲ್ಲಿ ಭಾರಿ ಚಿತ್ರಗಳು ಬಂದಿವೆ. ಇಂತಹ ಪರಿಸ್ಥಿತಿಯಲ್ಲಿ, ಈ ಬಗ್ಗೆ ಸದನದಲ್ಲಿ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕೆಂದು ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ. ಇದು ಅತ್ಯಂತ ಪ್ರಾಮುಖ್ಯವಾದ ವಿಚಾರ. ಮಾನ್ಯ ಮುಖ್ಯಮಂತ್ರಿಗಳು ಈ ಸದನದಲ್ಲಿ ಇದ್ದಾಗ, ಇದನ್ನು ಅಷ್ಟು ಲಘುವಾಗಿ ನಾವು ಏನು ನಡೆದಿಲ್ಲವೇನೊ ಎನ್ನುವ ರೀತಿಯಲ್ಲಿ ನಡೆದಿರುವುದು ನಮಗೆ ಯಾವುದು ಗೊತ್ತಿಲ್ಲವೇನೊ ಎನ್ನುವ ರೀತಿಯಲ್ಲಿ ನಾವೆಲ್ಲಾ ಕುಳಿತುಕೊಳ್ಳುವುದು ಸರಿಯಲ್ಲ. ಇದು ಯಾವುದೇ ಪಕ್ಷದ ಒಳಜಗಳ, ಅಂತರಿಕ ಜಗಳವಿರಬಹುದು, ಏನೇ ಇರಬಹುದು ಆದರೂ ಪತ್ರಿಕೆಗಳಲ್ಲಿ ಅದು ಮುಖಪುಟಗಳಲ್ಲಿ ಬಂದಿರುವುದನ್ನು ನೋಡಿದಾಗ ಇದು ನಿಜವಾಗಿಯೂ ಭಯಾನಕ ಮತ್ತು ಗಂಭೀರವಾದಂತಹ ವಿಚಾರವಾಗುತ್ತದೆ. ಇಂತಹ ಪರಿಸ್ಥಿತಿಯ ಬಗ್ಗೆ ಸಮಗ್ರವಾದ ಚರ್ಚೆಯಾಗಬೇಕಾಗುತ್ತದೆ ಮತ್ತು ಇಂತಹ ಪ್ರಕರಣದ ಹಿಂದೆ ಇರುವ ಪಿತೂರಿ ಏನು ಎಂಬುದನ್ನು ತಿಳಿಯಲು ಇದನ್ನು ಸಿ.ಬಿ.ಐ.ಗೆ ವಹಿಸಿ ಎಂದು ಒತ್ತಾಯ ಮಾಡುವಂತಹ ಪರಿಸ್ಥಿತಿ ಇವತ್ತು ನಮ್ಮಲ್ಲಿ ಇದೆ. ಆದುದರಿಂದ ಇದರ ಬಗ್ಗೆ ಸಮಗ್ರವಾದ ಚರ್ಚೆ ಮಾಡುವುದಕ್ಕೆ ತಾವು ಅವಕಾಶ ಕೊಡಬೇಕು; ತಾವು ಅವಕಾಶ ಕೊಟ್ಟರೆ ಚರ್ಚೆಯನ್ನು ನಾನು ಪ್ರಾರಂಭ ಮಾಡುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ) :- ಮಾನ್ಯ ಅಧ್ಯಕ್ಷರೇ, ಸುಸಂಸ್ಕೃತ ವ್ಯಕ್ತಿಗಳು ರಾಜಕೀಯ ಕ್ಷೇತ್ರಕ್ಕೆ ಬರುವುದಕ್ಕೆ ಮುಂಚೆ ಯೋಚನೆ ಮಾಡುತ್ತಾರೆ. ರಾಜಕೀಯವೆಂದರೆ ಒಂದು

ರೀತಿಯ ಹೊಲಸು ಎನ್ನುವ ತರಹದಲ್ಲಿ. ಈಗಾಗಲೇ ಈ ಬಗ್ಗೆ ತಿದ್ದುಪಡಿ ಮಸೂದೆ ಬರುತ್ತಿದೆ. ಏನೆಂದರೆ ಹೆಣ್ಣುಮಕ್ಕಳಿಗೂ ಕೂಡ ಹೆಚ್ಚಿನ ಪ್ರಾಶಸ್ತ್ಯ ಕೊಡುತ್ತೇವೆ, ಅವರು ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸಬೇಕು ಎಂದು, ಆದರೆ ಇಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳು ರಾಜಕೀಯ ಕ್ಷೇತ್ರಕ್ಕೆ ಬರುವುದಕ್ಕೆ ಅವಕಾಶ ಉಂಟಾ? ಹೆಣ್ಣು ಮಕ್ಕಳನ್ನು ರಾಜಕೀಯ ಕ್ಷೇತ್ರಕ್ಕೆ ಕಳುಹಿಸಬೇಕೋ, ಬೇಡವೋ ಎಂದು ಯೋಚನೆ ಮಾಡುವಂತಹ ಪರಿಸ್ಥಿತಿಯನ್ನು ನಿನ್ನೆ ಕಾಂಗ್ರೆಸ್ ಪಕ್ಷವು ರಾಜ್ಯದಲ್ಲಿ ಉಂಟುಮಾಡಿದೆ. ರಾಜಕೀಯ ಕ್ಷೇತ್ರದಲ್ಲಿ ಕೆಲಸ ಮಾಡುವಂತಹ ಪ್ರತಿಯೊಬ್ಬ ವ್ಯಕ್ತಿಗಳು ತಲೆತಗ್ಗಿಸುವಂತಹ ಕೃತ್ಯವಿದು. ಇಡೀ ಕರ್ನಾಟಕದ ಜನರು ಒಂದು ರೀತಿಯ ಭಯಭೀತಿಗೆ ಒಳಗಾಗಿದ್ದಾರೆ. ರಸ್ತೆಗಳಲ್ಲಿ ನಿರ್ಭೀತಿಯಿಂದ ಓಡಾಡುವುದಕ್ಕೂ ಕಷ್ಟವಾಗುವಂತಹ ಪರಿಸ್ಥಿತಿಯಿದೆ. ರಾಜಕೀಯ ಕ್ಷೇತ್ರದಲ್ಲಿ ಪಕ್ಕದಲ್ಲೇ ಪಿಸ್ತೂಲ್ ಇಟ್ಟುಕೊಂಡು ಕೆಲಸ ಮಾಡುವಂತಹ ಪರಿಸ್ಥಿತಿ ಬಂದಿದೆ.

(ಗೊಂದಲ)

ಶ್ರೀ ಎಂ. ಮಹದೇವ್ : – ವಾಸ್ತವ ಸ್ಥಿತಿ ನಿಮಗೆ ಗೊತ್ತಿದೆ.

ಶ್ರೀ ಕೆ.ಎಸ್. ಈಶ್ವರಪ್ಪ : – ಮಾನ್ಯ ಅಧ್ಯಕ್ಷರೇ, ನಾವು ನಿಮ್ಮನ್ನು ರಕ್ಷಣೆ ಕೇಳುವಂತಹ ಪರಿಸ್ಥಿತಿ ಬಂದಿದೆ. ರಾಜ್ಯದ ಮುಖ್ಯ ಮಂತ್ರಿಗಳಿಗೇ ಈ ಸ್ಥಿತಿ ಬಂದರೆ ಇನ್ನು ಸಾಮಾನ್ಯ ಜನರ ಪರಿಸ್ಥಿತಿ ಏನು, ಹೆಣ್ಣು ಮಕ್ಕಳಿಗೆ ಆದ್ಯತೆ ಕೊಡಬೇಕೋ ಬೇಡವೋ...

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : – ಇಡೀ ಕರ್ನಾಟಕ ರಾಜ್ಯ ತಲೆತಗ್ಗಿಸುವಂತಹ ಪರಿಸ್ಥಿತಿ ಒದಗಿ ಬಂದಿದೆ. ಭಯೋತ್ಪಾದನೆಯ ರೀತಿಯಲ್ಲಿ ಈ ಕೃತ್ಯ ನಡೆದಿದೆ. ನಾನು ಸಭೆ ಪ್ರಾರಂಭದಲ್ಲೇ ತಮ್ಮಲ್ಲಿ ಮನವಿ ಮಾಡಿದ್ದೇನೆ. ನಮಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಡಿ ಎಂದು; ಪತ್ರಿಕೆಗಳಲ್ಲಿ ಬಂದಿರುವ ಚಿತ್ರಗಳನ್ನು ತಾವು ನೋಡಬೇಕು. ಮುಖ್ಯಮಂತ್ರಿಗಳ ಮೇಲೆ ಹಲ್ಲೆಯ ಪ್ರಯತ್ನ ಎನ್ನುವಂತಹ ಪ್ರಶ್ನೆ ಬಂದಿರುವಾಗ ಇಲ್ಲಿ ನಾವು ಸುಮ್ಮನೆ ಕುಳಿತು ಈ ಸಭೆಯನ್ನು ನಡೆಸುವುದರಲ್ಲಿ ಅರ್ಥವಿಲ್ಲ. ಇದರಲ್ಲಿಯಾವ ಪ್ರಯೋಜನವಿಲ್ಲವೆನ್ನುವುದನ್ನು ಹೇಳುತ್ತೇನೆ. ಸಮಗ್ರವಾಗಿ ಇಂತಹ ಕೃತ್ಯಕ್ಕೆ ಸಿ.ಬಿ.ಐ. ತನಿಖೆಯಾಗಬೇಕು ಎಂದು ನಾನು ಒತ್ತಾಯ ಮಾಡುತ್ತಿದ್ದೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : – ಬಹಿರಂಗವಾಗಿ ಭ್ರಷ್ಟಾಚಾರಗಳನ್ನೆಲ್ಲಾ ನಾವು ಹೊರಗೆ ಹಾಕುತ್ತಿದ್ದೇವೆ. ರಾಜಕೀಯ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿರುವಂತಹ ಸಂದರ್ಭದಲ್ಲಿ ನಿನ್ನೆ ಈ ಘಟನೆ ನಡೆದಿದೆ.

(ಗೊಂದಲ)

ಅಧ್ಯಕ್ಷರು : – ಏನು ಆಗಬೇಕು ಹೇಳಿ,

ಶ್ರೀ ಕೆ.ಎಸ್. ಈಶ್ವರಪ್ಪ : – ಚರ್ಚೆ ನಡೆಯಲು ಅವಕಾಶ ಮಾಡಿಕೊಡಿ.

ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು) : – ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ವಾಟಾಳ್ ನಾಗರಾಜ್ ಮತ್ತು ಬಿ.ಜೆ.ಪಿ. ಪಕ್ಷದ ಅಧ್ಯಕ್ಷರು ಎತ್ತಿದಂತಹ ವಿಚಾರ ಬಹಳ ಗಂಭೀರವಾದಂತಹ ವಿಚಾರವಾಗಿದೆ. ಈ ವಿಚಾರದ ಬಗ್ಗೆ ಚರ್ಚೆಯಾಗಬೇಕಾಗಿದೆ. ಆದರೆ ಒಂದು

ಸಲಹೆ ಕೊಡುತ್ತೇನೆ. ಈಗಾಗಲೇ ಕಾವೇರಿಯ ವಿಚಾರದಲ್ಲಿ ಚರ್ಚೆ ನಡೆದಿದೆ. ಆದರೆ ಇವತ್ತು ಸಂಜೆವಾಣಿ ಮತ್ತು ಟೈಮ್ಸ್ ಆಫ್ ಇಂಡಿಯಾದಲ್ಲಿ ಬಂದಂತಹ ಚಿತ್ರಗಳನ್ನು ನೋಡಿದರೆ ನಮಗೆ ಭಯವಾಗುತ್ತದೆ. ಚಿತ್ರದಲ್ಲಿ ಕಾಂಗ್ರೆಸ್ (ಐ) ಶಾಸಕರು ಮುಖ್ಯಮಂತ್ರಿಗಳ ಮೇಲೆ ಕೈ ಮೇಲೆ ಮಾಡಿ ಹೊಡೆಯುವುದಕ್ಕೆ ಹೊರಟಿದ್ದಾರೆ. ಮುಖ್ಯಮಂತ್ರಿಗಳು ಭಯಭೀತರಾಗಿ ಓಡುತ್ತಿದ್ದಾರೆ.

(ಗೊಂದಲ)

SRI M.MAHADEV (Nanjangud) : - I am on a Point of Order.

ಶ್ರೀ ಆರ್.ವಿ. ದೇಶಪಾಂಡೆ :- ಇವತ್ತು ರಾಜ್ಯದ ಮುಖ್ಯಮಂತ್ರಿಗಳು ಗೃಹ ಖಾತೆಯ ಸಚಿವರು ಆಗಿದ್ದರೂ ರಾಜ್ಯದ ಮುಖ್ಯಮಂತ್ರಿಗಳ ಪರಿಸ್ಥಿತಿ ಹೀಗೆ ಆಗಿದೆ. The Chief Minister who is himself the Home Minister is frightened. ಈ ರಾಜ್ಯದಲ್ಲಿ ಪೋಲೀಸ್‌ನವರು ಇದ್ದಾರೋ ಇಲ್ಲವೋ? ಇದ್ದರೆ Whether they have taken cognizance of this ? Whether a case has been registered for attempting to assault the Chief Minister? I would like to know from the Chief Minister; it is not in the control of the Chief Minister.

(INTERRUPTIONS)

ನಿನ್ನೆ ಮುಖ್ಯಮಂತ್ರಿಗಳು ನನ್ನ ಮೇಲೆ ನಾಲ್ಕು ಅಟ್ಯಾಕ್ ಆಗಿದೆ, ಇನ್ನೂ ಐದು ಆಗಲಿ ನಾನು ಪ್ರಾಣ ಕೊಡುತ್ತೇನೆ ಎಂದು ಹೇಳಿದರು. It is not a personal property. If there is a law in this land, if there is G.P.C. the Police have to take cognizance of this and initiate immediate action against those who have tried to attack on the life of the Chief Minister. It cannot be decided on the pleasure of the Chief Minister. ನಾಳೆ ಉಪಮುಖ್ಯಮಂತ್ರಿಗಳ ಮೇಲೆ ಆಗಬಹುದು. ನನ್ನ ಮೇಲೆ ಆಗಬಹುದು, ಚಂದ್ರೇಗೌಡರ ಮೇಲೆ ಆಗಬಹುದು. There will be Constitutional dead-lock.ಮುಖ್ಯಮಂತ್ರಿಗಳು ಚಾಕು, ಚೂರಿ ಸಂಸ್ಕೃತಿಯ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ ಎಂದಿದ್ದಾರೆ. ಆದರೆ ಪ್ರಾಕ್ಟಿಕಲಿ ಇವತ್ತು ರಾಜ್ಯದಲ್ಲಿ ಚಾಕು ಚೂರಿ ಸಂಸ್ಕೃತಿ ಇದೆ. ಕೇವಲ ಮಾತಿನಿಂದ, ಘೋಷಣೆಗಳಿಂದ ಗುರಿಮುಟ್ಟುವುದಕ್ಕೆ ಆಗುವುದಿಲ್ಲ. ನಿಮ್ಮಲ್ಲಿ ಶಕ್ತಿ ಇದ್ದರೆ ಕ್ರಮ ತೆಗೆದುಕೊಳ್ಳಿ. ಇದು ನಮ್ಮ ರಾಜ್ಯದ ಗೌರವದ ಪ್ರಶ್ನೆ. ಅದು ಕಾಂಗ್ರೆಸ್ (ಐ) ಇರಬಹುದು, ಜನತಾ ದಳವಿರಬಹುದು. ಕಮ್ಯೂನಿಸ್ಟ್ ಇರಬಹುದು. ಅದು ಯಾರಾದರೂ ಸರಿ, ಕಾನೂನು ಉಲ್ಲಂಘನೆ ಮಾಡಿದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಬ್ಬ ಶಾಸಕ ಆದರೆ you let him free. ಆದರೆ ಒಬ್ಬ ಸಾಮಾನ್ಯ ಪ್ರಜೆಗೆ ಇದೇ ಪ್ರಕಾರ ನಿಮ್ಮ ಮೇಲೆ ಅಟ್ಯಾಕ್ ಮಾಡಿದ್ದರೆ ಏನು ಮಾಡುತ್ತಿದ್ದೀರಿ, ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ; ಆದ್ದರಿಂದ ಈ ವಿಷಯ ಚರ್ಚೆಯಾಗಬೇಕು.

ಶ್ರೀ ಎ.ಕೆ. ಅನಂತಕೃಷ್ಣ :- ಅಧ್ಯಕ್ಷರೇ, ...

ಅಧ್ಯಕ್ಷರು :- ತಾವು ಕುಳಿಕುಕೊಳ್ಳಿ

ಶ್ರೀ ಎ.ಕೆ. ಅನಂತಕೃಷ್ಣ :- ಆಗಿನಿಂದ ನನ್ನನ್ನು ಕೂರಿಸುತ್ತಿದ್ದೀರಿ. ನನಗೆ ಕೂಡ

ಮಾತನಾಡಲಿಕ್ಕೆ ಒಂದು ಅವಕಾಶ ಇದೆಯೋ ಇಲ್ಲವೋ ?

(ಗೊಂದಲ)

ಅಧ್ಯಕ್ಷರು :- ನೋಡಿ, ಅವಕಾಶ ಕೊಡುವ ಸಮಯದಲ್ಲಿ ಅವಕಾಶ ಕೊಡುತ್ತೇನೆ. ಸದಾ ಕಾಲ ಅವಕಾಶ ಬೇಡಿದರೆ ಆಗುವುದಿಲ್ಲ; ಕುಳಿತುಕೊಳ್ಳಿ. ನಾನು ಮಧ್ಯಾಹ್ನ ಇದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಡುತ್ತೇನೆ. ಈಗ ಕಾವೇರಿ ನಿಲುವಳಿ ಸೂಚನೆಯ ಬಗ್ಗೆ ತಾವು ಪ್ರಸ್ತಾಪ ಮಾಡಬೇಕು.

ಶ್ರೀ ಎ.ಎಸ್. ನಾಡಗೌಡ :- ನಿನ್ನೆ ಈ ಬಗ್ಗೆ ಆಗಲೇ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ಕೊಟ್ಟಿದ್ದಾರೆ. ಮತ್ತೆ ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿಕೊಟ್ಟು ಗೊಂದಲ ಸನ್ನಿವೇಶ ಉಂಟು ಮಾಡುವಂತಹ ಪರಿಸ್ಥಿತಿಗೆ ಈ ಸದನ ಇಳಿಯಬಾರದು, ಅದಕ್ಕೆ ಅವಕಾಶ ಕೊಡಬಾರದು.

(ಗೊಂದಲ)

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ ಒಂದು ಪಕ್ಷದ ಆಂತರಿಕವಾದ ವಿಚಾರಗಳನ್ನು ಈ ಸಭೆಯಲ್ಲಿ ಪ್ರಸ್ತಾಪ ಮಾಡುವುದಾದರೆ ಹೇಗೆ ?

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ :- ಇದರಿಂದ ಇಡೀ ಸದನಕ್ಕೆ.....

ಶ್ರೀ ವಾಟಾಳ್ ನಾಗರಾಜ್ :- ಇದು ಆಂತರಿಕ ವಿಚಾರ ಅಲ್ಲ; ಮುಖ್ಯ ಮಂತ್ರಿಗಳ ಮೇಲೆ ಆದ ಹಲ್ಲೆ ಪ್ರಕರಣ.

(ಗೊಂದಲ)

ಅಧ್ಯಕ್ಷರು :- ಆಯಿತು; ಎಲ್ಲರೂ ಕುಳಿತುಕೊಳ್ಳಬೇಕು. ಮಾನ್ಯ ರಮೇಶ್‌ರವರೇ, ತಾವೂ ಸಹ ಕುಳಿತುಕೊಳ್ಳಬೇಕು.

ಶ್ರೀ ಎಸ್. ರಮೇಶ್ :- ಸರ್ಕಾರವನ್ನೆಲ್ಲಾ ಅವರೇ ನಡೆಸುತ್ತಿದ್ದಾರೆ. ಪಾರ್ಟಿನಲ್ಲೂ ಅವರನ್ನೇ ಕೇಳಿ ನಡೆಸಬೇಕೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ನಿಮಗೆ ನಾಚಿಕೆ ಇದೆಯೇ ? ನನಗೆ ನೋವಾಗುತ್ತಿದೆ; ನಗುತ್ತಾ ಇದ್ದೀರಿ, ಪೀಠದ ಮುಂದೆ ಕುಳಿತುಕೊಂಡು ನಗುತ್ತಾ ಇದ್ದೀರಲ್ಲಾ! ಅವಿವೇಕದ ಪರಮಾವಧಿ ಇದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ನಗುವುದು ಏನು ಇದೆ ಎಂದು ನಗುತ್ತಾ ಇದ್ದೀರಿ ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಏನು ದೊಂಬರಾಟ ಆಡುತ್ತಿದ್ದೀರಾ ?

(ಗೊಂದಲ)

ನಿಯಮ 68ರ ಮೇರೆಗೆ ಚರ್ಚೆ

ವಿಷಯ:- ಕಾವೇರಿ ನದಿ ನೀರಿನ ಹಂಚಿಕೆ ವಿಚಾರದಲ್ಲಿ ಕರ್ನಾಟಕ ರಾಜ್ಯಕ್ಕೆ ಅನ್ಯಾಯವಾಗಿರುವ ಬಗ್ಗೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) :-ಮಾನ್ಯ ಅಧ್ಯಕ್ಷರೇ, ಈಗ ನಾನು ತಮ್ಮ ಪೀಠವನ್ನು ನೋಡಿ ಮಾತನಾಡಬೇಕು ಎಂದು ತಾವು ತೀರ್ಪನ್ನು ಕೊಡುತ್ತಾ ಇದ್ದೀರಿ. ಅದು ಬಹಳ ಕಷ್ಟವಾಗುತ್ತದೆ. ಏಕೆಂದರೆ ಬರೀ ನಿಮ್ಮನ್ನು ನೋಡುತ್ತಾ ಇದ್ದರೆ ಇವರ ಪರಿಸ್ಥಿತಿಯನ್ನು ಸಹ ನೋಡಲೇಬೇಕಾಗುತ್ತದೆ.